<u>ದಿನಾಂಕಃ 09-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರಃ ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದಃ-</u>

ಪ್ರತಿವಾದಿಯ ನಿರ್ದಿಷ್ಟ ಜನದಿನಾಂಕ ನನಗೆ ನೆನಪಿಲ್ಲ, ಸಾಕ್ಷಿ ಮುಂದುವರಿದು ಆತ 1978 ರಲ್ಲಿ ಜನಿಸಿರುತ್ತಾನೆ ಎನ್ನುತ್ತಾರೆ. ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ಅವರ ವಿರುದ್ಧ ದಾಖಲಾಗಿದ್ದ ಕೇಸುಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ತೀರಿಕೊಂಡ ನಂತರ ನನಗೆ, ನನ್ನ ಸಹೋದರ ಸಹೋದರಿಯರಿಗೆ ನ್ಯಾಯಾಲಯದಿಂದ ನೋಟೀಸ್ ಬಂದಿತ್ತು ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಡಿ.ಸಿ.ಸಿ ಬ್ಯಾಂಕ್ ನಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ ಎಷ್ಟು ಪ್ರಮಾಣದ ವೇತನ ಇತ್ತು ಎಂದು ನನಗೆ ಮಾಹಿತಿ ಇಲ್ಲ. ನನ್ನ ತಂದೆ ನಿವೃತ್ತಿ ಹೊಂದಿದಾಗ ಎಷ್ಟು ನಿವೃತ್ತಿ ಭತ್ಯೆ ಬಂತು ಎಂದು ನನಗೆ ಮಾಹಿತಿ ಇಲ್ಲ. ಈ ದಾವೆ ಹೂಡುವ ಪೂರ್ವದಲ್ಲಿ ನನ್ನ ತಂದೆಗೆ ತಮ್ಮ ಸೇವೆಯಿಂದ ಎಷ್ಟು ವೇತನ ಬರುತ್ತಿತ್ತು, ಅವರು ನಿವೃತ್ತಿ ಹೊಂದಿದಾಗ ಎಷ್ಟು ನಿವೃತ್ತಿ ಭತ್ಯೆ ಬಂತು, ನಮ್ಮ ಕುಟುಂಬಕ್ಕೆ ಎಷ್ಟು ಸಾಲ ಇತ್ತು ಎಂಬ ಬಗ್ಗೆ ನಾನು ಮಾಹಿತಿ ಕಲೆ ಹಾಕಿಲ್ಲ. ಕೋಟೆ ವಾಸಿ ತಿರುಮಲರಾಜು ಬಿನ್ ಕೆ.ಟಿ. ಮರಿರಾಜು ಇವರ ಪರಿಚಯ ನನಗೆ ಇಲ್ಲ. ಸದರಿಯವರು ನನ್ನ ತಂದೆ ಜೀವಂತ ಇದ್ದಾಗಲೇ ಓ.ಎಸ್.ನಂ.233/2003 ರಂತೆ ದಾವೆ ಹೂಡಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ದಾವೆ ವಿಚಾರಣೆಗೆ ಬಾಕಿ ಇದ್ದ ಕಾಲಕ್ಕೆ ನನ್ನ

ತಂದೆ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ಓ.ಎಸ್.ನಂ.233/2003 ರಂತೆ ದಾವೆ ಸಂಬಂಧ ನನ್ನ ತಂದೆ ವಾರಸುದಾರರಾದ ನಾನು, ನನ್ನ ಸಹೋದರ ಸಹೋದರಿ ಮತ್ತು ನನ್ನ ತಾಯಿಗೆ ನ್ಯಾಯಾಲಯದಿಂದ ನೋಟೀಸ್ ಬಂದಿತ್ತು ಎಂದರೆ ಸಾಕ್ಷಿ ನಾನು ಆಗ ಬೆಂಗಳೂರಿನಲ್ಲಿ ಇದ್ದೆ ಈ ಸಂಬಂಧ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಬೆಂಗಳೂರಿನಲ್ಲಿ ಇದ್ದೆ ಎಂದು ಹೇಳಲಾದ ಕಾಲಕ್ಕೆ ನನ್ನ ಚಿಕ್ಕಮಗಳೂರು ವಿಳಾಸ ಅಜ್ಜಿ ಹೋಟೆಲ್ ಹತ್ತಿರ, ರಾಮೇಶ್ವರ ನಗರ, ಚಿಕ್ಕಮಗಳೂರು ಎಂದಾಗಿತ್ತು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆ ಪರವಾಗಿ ಯಾವುದೇ ಬ್ಯಾಂಕ್ ಗೆ ಅಥವಾ ನ್ಯಾಯಾಲಯದ ಮುಖಾಂತರ ದಾವೆ ಬಾಬ್ತು ಯಾವುದೇ ಹಣ ನಾನು ಪಾವತಿ ಮಾಡಿಲ್ಲ. ದಿಃ15.02.2012 ರಂದು ಓ.ಎಸ್.ನಂ.233/2003 ರ ದಾವೆಯಲ್ಲಿ 5 ಲಕ್ಷ ಹಾಗೂ ಅದರ ಮೇಲೆ ದಾವೆ ಹೂಡಿದಾಗಿನಿಂದ ಡಿಕ್ರಿವರೆಗೆ ಶೇ.18 ಬಡ್ಡಿದರ ಮತ್ತು ಡಿಕ್ರಿ ದಿನಾಂಕದಿಂದ ಸಂಪೂರ್ಣ ಹಣ ಪಾವತಿ ಮಾಡುವವರೆಗೆ ಶೇ.9 ರ ಬಡ್ಡಿದರದಲ್ಲಿ ಹಣ ಪಾವತಿ ಮಾಡಬೇಕೆಂದು ತೀರ್ಮಾನ ಆಗಿದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ತೀರ್ಪು ಮತ್ತು ಡಿಕ್ರಿ ವಿರುದ್ಧ ನಾನು, ನನ್ನ ತಾಯಿ ಹಾಗೂ ನನ್ನ ಸಹೋದರ ಸಹೋದರಿಯರು ಸೇರಿ ಆರ್.ಎ.36/2012 ರಂತೆ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಮೇಲ್ಮನವಿ ದಿಃ25.04.2013 ರಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಓ.ಎಸ್.ನಂ.233/2003 ರ ದಾವೆಯಲ್ಲಿ ಆದ ತೀರ್ಪು

ಮತ್ತು ಡಿಕ್ರಿ ಸಂಬಂಧ ನನಗೆ ಯಾವುದೇ ಅಮಲ್ಜಾರಿ ಅರ್ಜಿಯಲ್ಲಿ ನೋಟೀಸ್ ಜಾರಿಯಾಗಿಲ್ಲ. ಓ.ಎಸ್.ನಂ.233/2003 ರ ದಾವೆಯಲ್ಲಿ ದ ತೀರ್ಪು ಮತ್ತು ಡಿಕ್ರಿಯ ಷರತ್ತಿನಂತೆ ಸಂಪೂರ್ಣ ಹಣವನ್ನ ಪ್ರತಿವಾದಿ ತಿರುಮಲರಾಜ್ ಇವರಿಗೆ ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಶ್ರೀನಿವಾಸ್ ರಾಜ್ ಅರಸ್, ಲೋಕನಾಥ್ ರಾಜ್ ಅರಸ್, ಮಲ್ಲಿಕಾರ್ಜುನ್ ರಾಜ್, ಮಂಜುನಾಥ ರಾಜ್, ಲಾರಿ ಗಣೇಶ್ ಇವರ ಪರಿಚಯ ಇದೆ. ಮೇಲೆ ಹೇಳಿದವರ ಜೊತೆ ನನ್ನ ತಂದೆಗೆ ಏನು ಹಣಕಾಸಿನ ವ್ಯವಹಾರ ಇತ್ತು ಎಂದು ನನಗೆ ಮಾಹಿತಿ ಇಲ್ಲ. ಚಿಕ್ಕಮಗಳೂರಿನ ರಾಮೇಶ್ವರ ನಗರದಲ್ಲಿ ಇರುವ ಮಂಜುನಾಥ್ ಇವರು ನನ್ನ ತಂದೆಯ ಸ್ನೇಹಿತರು. ಸದರಿಯವರು ನನ್ನ ತಂದೆಗೆ ಎಷ್ಟು ಹಣ ಕೊಡಬೇಕಿತ್ತು ಎಂದು ನನಗೆ ಮಾಹಿತಿ ಇಲ್ಲ. ಮೇಲೆ ಹೇಳಿದವರು ಯಾರೂ ನನ್ನ ಬಳಿ ನನ್ನ ತಂದೆ ಸಾಲ ಮಾಡಿದ ಬಾಬ್ತು ಹಣ ವಾಪಾಸ್ ಕೇಳಿಲ್ಲ. ಎಸ್.ಎಫ್.ಲೂಹೀಸ್ ಮತ್ತು ಶಕುಂತಲಮ್ಮ ಇವರು 2010 ಮತ್ತು2012 ರಲ್ಲಿ ನನ್ನನ್ನ, ನನ್ನ ಸಹೋದರ ಸಹೋದರಿಯರನ್ನ ಮತ್ತು ನನ್ನ ತಾಯಿಯನ್ನ ಪಕ್ಷಗಾರರನ್ನಾಗಿ ಮಾಡಿ ದಾವೆ ಹೂಡಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.6 ರ ಸ್ವತ್ತನ್ನ ಪ್ರತಿವಾದಿ 1999 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ 1997 ರಲ್ಲಿ ನನ್ನ ತಂದೆ ನನ್ನ ಸಹೋದರನ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರು 1999 ರಲ್ಲಿ ತಮ್ಮ ಕುಟುಂಬದ ಆಸ್ತಿಗಳನ್ನ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದಲ್ಲಿ ದಾವಾ ಅನುಸೂಚಿ

ಐಟಂ ನಂ.6 ರ ಆಸ್ತಿಯನ್ನ ಸೇರ್ಪಡೆ ಮಾಡಿಲ್ಲ. ದಾವಾ ಅನುಸೂಚಿ ಐಟಂ ನಂ.1 ರಿಂದ 4 ರ ಆಸ್ತಿಗಳು 1999 ರಲ್ಲಿ ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಆದ ವಿಭಾಗದಲ್ಲಿ ನನ್ನ ತಂದೆ ಹಿಸ್ಸೆಗೆ ಬಂದಿವೆ ಎಂದರೆ ಸಾಕ್ಷಿ ಸದರಿ ಆಸ್ತಿಗಳು ಮತ್ತು ದಾವಾ ಅನುಸೂಚಿ 5 ಮತ್ತು 7 ರ ಆಸ್ತಿಗಳೂ ಸಹ ನನ್ನ ತಂದೆ ಹಿಸ್ಸೆಗೆ ಸದರಿ ವಿಭಾಗದಲ್ಲಿ ಬಂದಿವೆ ಎನ್ನುತ್ತಾರೆ. ಈ ದಾವೆಯಿಲ್ಲಿ ದಾವಾ ಅನುಸೂಚಿ ಐಟಂ ನಂ.7 ರ ಆಸ್ತಿ ಇಲ್ಲ ಎಂದರೆ ಸಾಕ್ಷಿ ನಾನು ಸರಿಯಾಗಿ ಗಮನಿಸಿಲ್ಲ ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.6 ರ ಆಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಆಗ ಪ್ರತಿವಾದಿಗೆ 18 ವರ್ಷ ವಯಸ್ಸಾಗಿತ್ತು ಆ ಕಾಲಕ್ಕೆ ಆತನಿಗೆ ಯಾವುದೇ ವರಮಾನ ಇರಲಿಲ್ಲ ಎನ್ನುತ್ತಾರೆ. 1997 ರಲ್ಲಿ ಪ್ರತಿವಾದಿಗೆ 20 ವರ್ಷ ವಯಸ್ಸಾಗಿತ್ತು ಅವರಿಗೆ ಪ್ರತ್ಯೇಕ ವರಮಾನ ಇತ್ತು ಎಂದರೆ ಸಾಕ್ಷಿ 19 ವರ್ಷ ವಯಸ್ಸಾಗಿತ್ತು ಆದರೆ ಯಾವುದೇ ವರಮಾನ ಇರಲಿಲ್ಲ ಎನ್ನುತ್ತಾರೆ. ನನ್ನ ತಂದೆ 2007 ರಲ್ಲಿ ತೀರಿಕೊಂಡ ಕಾಲಕ್ಕೆ ಪ್ರತಿವಾದಿ ಬೇರೆ ಏನು ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ. ನನ್ನ ತಂದೆ ತೀರಿಕೊಂಡ ನಂತರ ದಾವಾ ಅನುಸೂಚಿ ಐಟಂ ನಂ.1 ರಿಂದ 4 ರ ಆಸ್ತಿಗಳು ಪಾಳು ಬಿದ್ದಿದ್ದು ಯಾವುದೇ ವರಮಾನ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.1 ರಿಂದ 4 ರ ಆಸ್ತಿಗಳು ಕೃಷಿ ಜಮೀನುಗಳು ಎಂದರೆ ಸರಿ. ನನ್ನ ಕುಟುಂಬದಲ್ಲಿ ನನ್ನ ತಂದೆ ತೀರಿಕೊಂಡ ನಂತರ ಯಾರೂ ಕೃಷಿಕರು ಇರಲಿಲ್ಲ ಎಂದರೆ ಸಾಕ್ಷಿ ಬೇರೆಯವರನ್ನ ನೇಮಕ ಮಾಡಿಕೊಂಡು ಕೃಷಿ ಮಾಡುತ್ತಿದ್ದೆವು ಎನ್ನುತ್ತಾರೆ. ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ಬ್ಯಾಂಕ್ ಗಳಲ್ಲಿ ಮತ್ತು ಇತರ

ಮೂಲದಿಂದ ಸಾಕಷ್ಟು ಸಾಲ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಪ್ರತಿವಾದಿಗೆ ನೋಟೀಸ್ ಕಳುಹಿಸಿದ ನಂತರ ನನ್ನ ಕುಟುಂಬದಲ್ಲಿ ಆಸ್ತಿ ಹಂಚಿಕೆ ಸಂಬಂಧ ಪಂಚಾಯಿತಿ ಆಯಿತು ಎಂದರೆ ಸಾಕ್ಷಿ ನೋಟೀಸ್ ಕಳುಹಿಸುವ ಪೂರ್ವದಲ್ಲಿ ಮಾತುಕತೆ ಆಯಿತು ಆದರೆ ನಂತರದಲ್ಲಿ ಆಗಿರುವುದಿಲ್ಲ ಎನ್ನುತ್ತಾರೆ. ಪ್ರತಿವಾದಿಗೆ ನೋಟೀಸ್ ಕಳುಹಿಸಿದ ನಂತರ ನನ್ನ ಸೋದರ ಮಾವಂದಿರು ಸೇರಿ ಮಾತುಕತೆ ಮಾಡಿ ಇತ್ಯರ್ಥ ಮಾಡಲು ಪ್ರಯತ್ನಪಟ್ಟರು ಎಂದರೆ ಸಾಕ್ಷಿ ನೋಟೀಸ್ ಕಳುಹಿಸುವ ಪೂರ್ವದಲ್ಲಿ ನನ್ನ ಸೋದರ ಮಾವಂದಿರು ಮತ್ತು ಚಿಕ್ಕಪ್ಪಂದಿರು ಮಾತುಕತೆ ಮಾಡಿರುತ್ತಾರೆ ಆದರೆ ಅದು ಸಫಲ ಆಗಿರುವುದಿಲ್ಲ ಎನ್ನುತ್ತಾರೆ. 2007 ರಲ್ಲಿ ನಾನು ಬೆಂಗಳೂರಿನಲ್ಲಿ ವಾರೆನ್ ಕಮರ್ಷಿಯಲ್ ಪ್ರೈವೇಟ್ ಲಿಮಿಟೆಡ್ ನಲ್ಲಿ ಕೆಲಸ ಮಾಡುತ್ತಿದ್ದೆ. ನಿಮ್ಮ ತಂದೆ ತೀರಿಕೊಂಡ ನಂತರ ನಿಮಗೆ ಇದ್ದ ವರಮಾನದಲ್ಲಿ ಪ್ರತಿವಾದಿ ಮತ್ತು ನಿಮ್ಮ ತಾಯಿಗೆ ಹಣ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿ 2012 ರ ನಂತರ ಪ್ರತಿವಾದಿಗೆ 35 ಲಕ್ಷ ಹಣ ಕೊಟ್ಟಿದ್ದೇನೆ ಮತ್ತು ನನ್ನ ತಾಯಿಗೆ ಆಗಾಗ ಹಣ ಪಾವತಿ ಮಾಡುತ್ತಿದ್ದೆ ಎನ್ನುತ್ತಾರೆ. ಯಾವ ನಿರ್ದಿಷ್ಟ ದಿನಾಂಕದಂದು ಪ್ರತಿವಾದಿಗೆ ಹಣ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿ 2012 ರಿಂದ 2016 ರ ಒಳಗೆ 35 ಲಕ್ಷ ಹಣ ಪಾವತಿ ಮಾಡಿದ್ದೇನೆ ಎನ್ನುತ್ತಾರೆ. ಈ ವಿಚಾರವನ್ನ ವಾದ ಪತ್ರದಲ್ಲಿ ಪ್ರಸ್ತಾಪಿಸಿಲ್ಲ. ದಾವಾ ಅನುಸೂಚಿ ಐಟಂ ನಂ.6 ರ ಆಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದರಲ್ಲಿ ನನಗಾಗಲೀ ಮತ್ತು ನನ್ನ ತಾಯಿ ಮತ್ತು ಸಹೋದರಿಗಾಗಲೀ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅಕ್ರಮ ಲಾಭ

ಪಡೆಯಬೇಕೆಂಬ ಉದ್ದೇಶದಿಂದ ದಾವಾ ಅನುಸೂಚಿ ಐಟಂ ನಂ.6 ರ ಆಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಈ ದಾವೆಯಲ್ಲಿ ಸುಳ್ಳಾಗಿ ಸೇರ್ಪಡೆ ಮಾಡಿದ್ದೇನೆ ಎಂದರೆ ಸರಿಯಲ್ಲ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ